ಕರ್ನಾಟಕ ಸರ್ಕಾರ
ಹೈದ್ರಾಬಾದ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಕಲಬುರಗಿ
Hyderabad Karnataka Region Development Board Kalaburagi

ಸಂ:ಹೈಕಪ್ರಅಮಂ//ಸಿಬ್ಬಂದಿ/66/2018-19 4716 ದಿನಾಂಕ: 19 /08/2019

:: ಸುತ್ತೋಲೆ –6::

ವಿಷಯ: ಅಂತಿಮ ಬಿಲ್ ಅನುದಾನ ಪ್ರಸ್ತಾವನೆಯನ್ನು ಕ್ರಮಬದ್ಧವಾಗಿ ಪರಿಶೀಲಿಸುವ ಕುರಿತು.

ಉಲ್ಲೇಖ: ಈ ಕಾರ್ಯಾಲಯದ ಸುತ್ತೋಲೆ ಸಂಖ್ಯೆ: ಹೈಕಪ್ರಅಮಂ/ಸಿಬ್ಬಂದಿ/66/2018-19, ದಿನಾಂಕ: 19/03/2019.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಂಡಳಿಯ ಆನ್‌ಲೈನ್ ಮೂಲಕ ಕಾಮಗಾರಿಯ ಹಣ ಸಂದಾಯ ವ್ಯವಸ್ಥೆಯ ಪ್ರಕ್ರಿಯೆ ಕುರಿತು ಸವಿವರವಾದ ಸುತ್ತೋಲೆಯ ನಿರ್ದೇಶನಗಳನ್ನು ನೀಡಲಾಗಿದ್ದು, ಅನುಷ್ಠಾನಾಧಿಕಾರಿಯವರಿಂದ ಅಂತಿಮ ಬಿಲ್ ಅನುದಾನದ ಪ್ರಸ್ತಾವನೆಗೆ ಸಂಬಂಧಿಸಿದಂತೆ, ಯೋಜನಾ ಶಾಖೆಯಿಂದ ಪ್ರಸ್ತಾವನೆಯಲ್ಲಿನ ಸಂಪೂರ್ಣ ದಾಖಲೆಗಳನ್ನು ಇಂಡೆಂಟ್‌ಗಳನ್ನು ಮಂಡಳಿಯ ಪತ್ರ ಸಂ: ಹೈಕಪ್ರಅಮಂ/ಆಡಳಿತ/ಸಿಬ್ಬಂದಿ/05/2018-19, ದಿನಾಂಕ: 20/12/2018ರಲ್ಲಿ ನಿರ್ದಿಷ್ಟಪಡಿಸಿದಂತೆ ಪರಿಶೀಲಿಸಿ, ನ್ಯೂನ್ಯತೆಗಳಿದ್ದಲ್ಲಿ ಅನುಷ್ಠಾನಾಧಿಕಾರಿಯವರಿಗೆ ತತಕ್ಷಣವೇ ಮಾಹಿತಿ ನೀಡಿ, ದಾಖಲಾತಿಗಳನ್ನು ಪಡೆದು, ಸರಿಯಾದ ರೀತಿಯಲ್ಲಿ ಪ್ರಸ್ತಾವನೆಯನ್ನು ಸಿದ್ದಪಡಿಸಿಕೊಂಡು, ನಿಯಮಾನುಸಾರ ಹಣ ಪಾವತಿಗೆ ಯೋಗ್ಯವಿರುವುದೆಂದು ಖಚಿತ ಪಡಿಸಿ, ಆಡಳಿತ ಶಾಖೆಗೆ ಕಳುಹಿಸುವುದು ಯೋಜನಾ ಶಾಖೆಯ ವಿಷಯ ನಿರ್ವಾಹಕರ ಕರ್ತವ್ಯವಿರುತ್ತದೆ.

ಆದರೇ, ಇತ್ತೀಚಿನ ದಿನಗಳಲ್ಲಿ ಅನುಷ್ಠಾನಾಧಿಕಾರಿಗಳಿಂದ ಭಾಗಶಃ ಹಾಗೂ ಅಂತಿಮ ಹಣ ಬೇಡಿಕೆ ಪ್ರಸ್ತಾವನೆಗಳನ್ನು ಅಸಮರ್ಪಕ ಪರಿಶೀಲನೆಯಿಂದ ದಾಖಲಾತಿಯ ಆಪೇಕ್ಷಿತದ ಕಾರಣ ಮಂಡಳಿಯಲ್ಲಿ ಹೆಚ್ಚಿನ ಮೊತ್ತದ ಬಿಲ್ಲಗಳು ಬಾಕಿ ಉಳಿಯುತ್ತಿರುವುದು ಕಂಡು ಬಂದ ಪ್ರಯುಕ್ತ ಜಿಲ್ಲಾವಾರು ಕಡತಗಳನ್ನು ಪರಿಶೀಲಿಸಿದಾಗ, ಯೋಜನಾ ಶಾಖೆಯವರು ಪ್ರಸ್ತಾವನೆಯನ್ನು ಪ್ರಾಥಮಿಕ ಹಂತದಲ್ಲಿ ಸರಿಯಾಗಿ ಪರಿಶೀಲಿಸದೇ ಆಡಳಿತ ಶಾಖೆಗೆ ಕಳುಹಿಸುತ್ತಿದ್ದು, ಈ ಪ್ರಸ್ತಾವನೆಗಳು ದಾಖಲಾತಿಗಳ ಕೊರತೆಯಿಂದ ಆಡಳಿತ ಶಾಖೆಯಲ್ಲಿ ಮರಳಿಸಲಾಗುತ್ತಿದೆ. ಈ ಕಾರಣದಿಂದ ಪ್ರಸ್ತಾವನೆಗಳು ಹಣ ಪಾವತಿಸಲಾಗದೇ ಬಾಕಿ ಉಳಿದಿರುತ್ತವೆ.

ದಿನಾಂಕ:17.8.2019ರ ಅಂತ್ಯಕ್ಕೆ ಅನುಷ್ಠಾನಾಧಿಕಾರಿಗಳಿಂದ ಅಗತ್ಯ ದಾಖಲಾತಿಗಳ ಪಡೆಯುವುದಕ್ಕೆ ಹೆಚ್ಚಿನ ಮೊತ್ತದಲ್ಲಿ ಕಡತಗಳು ಬಾಕಿಯಿರುವುದರಿಂದ ಪ್ರಸ್ತಾವನೆಗಳನ್ನು ಪರಿಶೀಲಿಸಿದಾಗ, ಜಿಲ್ಲಾಮಟ್ಟದ ಯೋಜನಾ ವಿಷಯ ನಿರ್ವಾಹಕರು ಹಲವಾರು ಪ್ರಕರಣಗಳಲ್ಲಿ ಕ್ರಮಬದ್ಧ ರೀತಿಯಲ್ಲಿ ಪರಿಶಿಲನೆ ನಡೆಸದೇ ದಾಖಲಾತಿಗಳಿಲ್ಲದೆಯಿರುವುದರಿಂದ ಹಾಗೂ ಭಾಗಶ: ಬಿಲ್ಲುಗಳಲ್ಲಿ ಆಡಳಿತ ಅನುಮೋದನೆಗೊಂಡ ವೆಚ್ಚ, ಅನುದಾನದ ವಿವರ ಹಾಗೂ ಇತರೆ ವೆಚ್ಚಗಳಲ್ಲಿ ವ್ಯತ್ಯಾಸಗಳಿದ್ದರು ಅವುಗಳನ್ನು ಸರಿಪಡಿಸದೇ ಹಣ ಪಾವತಿಗೆ ಮಂಡಿಸಿರುವುದರಿಂದ ಆಡಳಿತ ಅನುಮೋದನೆ ಹಂತದಲ್ಲಿ ನ್ಯೂನತೆ ಗುರುತಿಸಿ, ಅನುಷ್ಠಾನಾಧಿಕಾರಿಗಳಿಂದ ಆಪೇಕ್ಷಿತ ಮಾಹಿತಿ ಪಡೆಯುತ್ತಿರುಯವುದರಿಂದ ವಿಳಂಬತೆಯಾಗುತ್ತಿರುವುದು ಕಂಡುಬಂದಿದೆ.

ಯೋಜನಾ ಶಾಖೆಯ ವಿಷಯ ನಿರ್ವಾಹಕರು ಪ್ರಸ್ತಾವನೆಯಲ್ಲಿ ದಿನಾಂಕ: 20/12/2018ರ ಪತ್ರದಲ್ಲಿ ಗೊತ್ತುಪಡಿಸಿದ ದಾಖಲಾತಿಗಳು ಲಭ್ಯತೆ, ಅನುದಾನದ ವಿವರಗಳನ್ನು ಸೂಕ್ಷ್ಮತೆಯಿಂದ ಪರಿಶೀಲಿಸಿ, ನ್ಯೂನ್ಯತೆಗಳಿದ್ದಲ್ಲಿ, ಸಂಬಂಧಪಟ್ಟ ಅನುಷ್ಠಾನ ಇಲಾಖೆಯವರಿಗೆ ತಕ್ಷಣವೇ ಮಾಹಿತಿ ನೀಡಿ, ಅಗತ್ಯ ದಾಖಲಾತಿಗಳನ್ನು ಪಡೆದುಕೊಂಡು ಹಣ ಪಾವತಿಗೆ ಸಂಪೂರ್ಣವಿರುವ ಪ್ರಸ್ತಾವನೆಯನ್ನು ಉಪ ನಿರ್ದೇಶಕರು ಹಾಗೂ ಜಂಟಿ ನಿರ್ದೇಶಕರು ತಮ್ಮ ಹಂತದಲ್ಲಿಯೂ ಪರಿಶೀಲಿಸಿ, ಅರ್ಹ ಪ್ರಸ್ತಾವನೆಯನ್ನು ಮಾತ್ರ ಆಡಳಿತ ಶಾಖೆಗೆ ಮಂಡಿಸುವುದು.

ಪ್ರಸ್ತುತವಾಗಿ, ಯೋಜನಾ ಶಾಖೆಯಲ್ಲಿ ಹಾಗೂ ಲೆಕ್ಕ ಶಾಖೆಯಲ್ಲಿ ಸಮರ್ಪಕ ಪರಿಶೀಲನೆಯಾಗದೇ ಇರುವುದರಿಂದ ಆಡಳಿತಾತ್ಮಕ ಅನುಮೋದನೆಯ ಸಂದರ್ಭದಲ್ಲಿ ನ್ಯೂನ್ಯತೆಗಳು ಸರಿಪಡಿಸಲು ಕ್ರಮ ಜರುಗುತ್ತಿರುವುದರಿಂದ ಪ್ರಸ್ತಾವನೆಗಳು ಬಾಕಿ ಉಳಿಯುತ್ತಿರುವುದು ಗಂಭೀರತೆಯಿಂದ ಪರಿಗಣಿಸದೆ. ಪ್ರಯುಕ್ತ ಯೋಜನಾ ಶಾಖೆಯ ಹಂತದಲ್ಲಿ ಹಣ ಬೇಡಿಕೆಕ ಪ್ರಸ್ತಾವನೆಯನ್ನು ನಿಯಮಾನುಸಾರ ಪರಿಶೀಲಿಸಿ, ಅಗತ್ಯವಿರುವ ನ್ಯೂನ್ಯತೆ ಸರಿಪಡಿಸಿ, ಆಡಳಿತ ಶಾಖೆಗೆ ಸಲ್ಲಿಸಲು ನಿರ್ದೇಶಿಸಿದೆ.

19.8.19

ಕಾರ್ಯದರ್ಶಿಗಳು,
ಹೈದ್ರಾಬಾದ ಕರ್ನಾಟಕ ಪ್ರದೇಶ ಅಭಿವೃದ್ಧಿ
ಮಂಡಳಿ, ಕಲಬುರಗಿ.